ಕೊಡಿ, 10-15 ಲಕ್ಷ ರೂ.ಗಳನ್ನು ಕೊಟ್ಟು ಆ ಸಾಮಾನುಗಳನ್ನು ತೆಗೆದುಕೊಂಡು ಹೋಗುತ್ತೇನೆಂದು ಹೇಳಿದರು. ಮತ್ತು ಇದರಿಂದ ಈ ಕಟ್ಟಡ ಕಟ್ಟಿಸಿಕೊಳ್ಳುವುದಕ್ಕೆ ಸಹಾಯವಾಗುತ್ತದೆ ಎಂದು ಹೇಳಿದರು. ನನಗೆ ಬಂದಿರತಕ್ಕ ಸುದ್ದಿ ಪ್ರಕಾರ ಅಧಿಕಾರಿಗಳು ಮತ್ತು ಇತರೆಯವರು ಇದನ್ನು ದುರುಪಯೋಗ ಮಾಡಿಕೊಂಡು ಸ್ವಂತಕ್ಕೆ ಉಪಯೋಗ ಮಾಡಿಕೊಂಡಿದ್ದಾರೆ. ಇವತ್ತಿಗೂ ಕೆಡದಂಥ ಸುಮಾರು 50 ಸಾವಿರ ರೂಪಾಯಿಗಳ ಸಾಮಾನುಗಳು. ಅಲ್ಲಿ ಕಾಣುತ್ತಾ ಇಲ್ಲ. ಇದರ ಬಗ್ಗೆ ಸಮಗ್ರ ತನಿಖೆಯನ್ನು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಆಲ್ಲಿನ ಈ ಮರದ ಸಾಮಾನುಗಳು ಏನಾಗಿವೆ, ಅಧಿಕಾರಿಗಳು ಏನು ಮಾಡುತ್ತಿದ್ದಾರೆ, ಯಾರು ಯಾರೋ ತೆಗೆದುಕೊಂಡು ಹೋಗಿದ್ದಾರೆ, ಆ ಕಟ್ಟಡವನ್ನು ಕೆಡವಿದ ಕಾಲದಲ್ಲಿ ಯಾರು ಯಾರೋ ಜವಾಬ್ದಾರಿ ತೆಗೆದುಕೊಂಡಿದ್ದರು. ಯಾರ ಹತ್ತಿರ ಲೆಕ್ಕ ಇದೆ ಎಂಬ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಂ. ವೀರಪ್ಪಮೊಯ್ಲಿ:- ಕಟ್ಟಡ ಕೆಡವಿದಾಗ ಇದ್ದ ಮರಮುಟ್ಟುಗಳು ಏನಾಗಿವೆ ಎಂಬ ಬಗ್ಗೆ ಪ್ರತ್ಯೇಕವಾದ ತನಿಖೆ ಮಾಡಿಸುತ್ತೇನೆ. ಪ್ರಶ್ನೆ ಏನೆಂದರೆ, ಎಷ್ಟು ಹಣ ಒದಗಿಸಿದೆ ಎಂದು ಹೇಳಿದರೆ, ತಮಗೂ ಗೊತ್ತಿದೆ, ಜಿಲ್ಲಾಪರಿಷತ್ತಿನ ಡಿಸ್ಟ್ರಿಕ್ಟ್ ಸೆಕ್ಟಾರ್‌ನಲ್ಲಿ ಹಣ ಒದಗಿಸಬೇಕು, ಆದರೆ ಡಿಸ್ಟ್ರಿಕ್ಟ್ ಸೆಕ್ಟಾರ್‌ನಲ್ಲಿ ಇದಕ್ಕೆ ಹಣ ಒದಗಿಸಲೇ ಇಲ್ಲ, ಅದೇ ಸಮಸ್ಯೆ ಬಂದಿರುವುದು. ಈಗ ಸ್ಟೇಟ್ ಸೆಕ್ಟಾರ್‌ನಿಂದಲೇ, ಸೇವಿಂಗ್ಸ್‌ನಲ್ಲಿ ತಕ್ಷಣ, ಇದಕ್ಕಾಗಿ 10 ಲಕ್ಷ ಬಿಡುಗಡೆ ಮಾಡಬೇಕೆಂದು ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಡಿಸ್ಟ್ರಿಕ್ಟ್ ಸೆಕ್ಟಾರ್‌ನಲ್ಲಿ ಮುಂದೆ ಬರತಕ್ಕ 1992-93ನೇ ಸಾಲಿನಲ್ಲಿ ಇದಕ್ಕೆ ವಿಶೇಷವಾದ ಆದ್ಯತೆಯನ್ನು ಕೊಟ್ಟು ಹೆಚ್ಚು ಹಣವನ್ನು ಒದಗಿಸಿ, ಕಾರ್ಯಕ್ರಮ ತ್ವರಿತವಾಗಿ ಆಗುವಂತೆ ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

(ಶ್ರೀ ಕೆ.ಬಿ.ಕೋಳಿವಾಡ್‌ರವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಶ್ರೀ ಎಂ.ಮಹದೇವ್:- ಆ ಜಾಗದಲ್ಲಿದ್ದ ಕಟ್ಟಡ ಕೆಡವಲಾಗಿದೆ. ಅಲ್ಲಿ ಕಾಲು ಎಕರೆ ಜಮೀನು ಪಟ್ಟಣದ ಮಧ್ಯಪ್ರದೇಶದಲ್ಲಿದೆ. ಆ ಕಟ್ಟಡ ಕೆಡವಿದ ನಂತರ ಖಾಲಿ ನಿವೇಶನ ಏನು ಇದೆ, ಅದನ್ನು ಅಕ್ಕಪಕ್ಕದವರು ಎನ್‌ಕ್ರೋಚ್‌ಮೆಂಟ್ ಮಾಡಿಕೊಳ್ಳುತ್ತಿದ್ದಾರೆ. ಇದರ ಬಗ್ಗೆ ಜಿಲ್ಲಾಪರಿಷತ್‌ನವರೂ ಕಾಳಜಿ ವಹಿಸಲಿಲ್ಲ ಹಾಗೂ ಕ್ರಮ ತೆಗೆದುಕೊಂಡಿಲ್ಲ.

ಚೇರ್ಮನ್:- ಡೀಟೈಲ್ಸ್ ಎನ್‌ಕ್ವೈರಿ ಮಾಡಿಸುತ್ತೇವೆ ಎಂದು ಹೇಳಿದ್ದಾರಲ್ಲ.

ಶ್ರೀ ಎಂ. ಮಹದೇವ್:- ಏತಕ್ಕೆಂದರೆ ಇದು ಪ್ರಮುಖವಾದ ವಿಚಾರ. ಅದಕ್ಕಾಗಿ ಮಾನ್ಯ ಸಚಿವರಿಗೆ ಕೇಳುತ್ತಿದ್ದೇನೆ. ಅಲ್ಲಿ ಎರಡುಮೂರು ಸಾವಿರ ಮಕ್ಕಳು ಬಹಳ ತೊಂದರೆಯಲ್ಲಿದ್ದಾರೆ. ಮಾನ್ಯ ಮಂತ್ರಿಗಳಿಗೆ ಕಾಳಜಿ ಇರುವುದರಿಂದ ಅವರ ಗಮನವನ್ನು ಈ ಸದನದಲ್ಲಿ ಸೆಳೆಯುತ್ತಿದ್ದೇನೆ. ಅದು ಬಹಳ ಬೆಲೆ ಬಾಳತಕ್ಕ ಜಮೀನು. ನಂಜನಗೂಡು ಪಟ್ಟಣದ ಮಧ್ಯಭಾಗದಲ್ಲಿರುವ ಜಮೀನು. ಎನ್‌ಕ್ರೋಚ್ ಆಗುತ್ತಿದೆ. ಇದನ್ನು ತಪ್ಪಿಸಬೇಕು.

ಚೇರ್ಮನ್:- ಎಲ್ಲಾ ವಿಚಾರಣೆ ಮಾಡಿಸುತ್ತೇನೆ ಎಂದು ಮಂತ್ರಿಗಳು ಹೇಳಿದ್ದಾರೆ.

ಶ್ರೀ ಎಂ. ವೀರಪ್ಪಮೊಯ್ಲಿ:- ಇದೊಂದು ವಿಚಾರ ಆಗ ಹೇಳಿರಲಿಲ್ಲ. ಈಗ ಹೇಳಿದ್ದಾರೆ. ಅದಕ್ಕೆ ಉತ್ತರ ಕೊಡುತ್ತೇನೆ. ಏನು ಕಾಲು ಎಕರೆ ಜಾಗ ಇದೆ ಅದರ ಬಗ್ಗೆ ತಕ್ಷಣ ಫೆನ್ಸಿಂಗ್ ಮಾಡಿ ಅದನ್ನು ರಕ್ಷಣೆ ಮಾಡುವುದಕ್ಕೆ ಎಲ್ಲಾ ಕಾರ್ಯಕ್ರಮವನ್ನೂ ತಕ್ಷಣ ತೆಗೆದುಕೊಳ್ಳುತ್ತೇನೆ.

ಚೇರ್ಮನ್:- ಈಗ ಮಾನ್ಯ ಆಹಾರ ಮಂತ್ರಿಗಳು ಕೌನ್ಸಿಲ್‌ಗೆ ಹೋಗುವ ಜರೂರು ಇರುವುದರಿಂದ ಮಾನ್ಯ ಅಂಜನಮೂರ್ತಿಯವರು ತಮ್ಮ ಪ್ರಶ್ನೆ ಕೇಳಬೇಕು.

ವಿಷಯ:- ಪರಿಶಿಷ್ಟ ಜಾತಿ/ವರ್ಗದ ಹ್ಯಾಮಲೆಟ್ ಹಾಗೂ ಬಸ್ತಿಗಳು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 438 (2242)

ಶ್ರೀಮತಿ ಮೋಟಮ್ಮ (ಮೂಡಿಗೆರೆ):- ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ

ದಯವಿಟ್ಟು ಉತ್ತರಿಸುವಿರೆ

(ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಇನ್ನು ಎಷ್ಟು ಉಪ ಗ್ರಾಮಗಳು(ಹ್ಯಾಮ್ಲೆಟ್ಸ್) ಹರಿಜನ ಬಸ್ತಿಗಳು ವಿದ್ಯುದ್ಧೀಕರಣ ಆಗದೆ ಉಳಿದು ಹೋಗಿವೆ(ಆರ್.ಇ.ಸಿ. ಸ್ಕೀಮಿನಲ್ಲಿ) (ತಾಲ್ಲೂಕುವಾರು ಮಾಹಿತಿ ಒದಗಿಸುವುದು)

(ಆ) ಉಳಿದಿರುವ ಉಪಗ್ರಾಮಗಳು (ಹ್ಯಾಮ್ಲೆಟ್) ಹರಿಜನ, ಗಿರಿಜನ ಬಸ್ತಿಗಳಿಗೆ ಯಾವಾಗ ವಿದ್ಯುದ್ಧೀಕರಣ ಮಾಡಲಾಗುವುದು?

ಶ್ರೀ ಎಂ.ರಾಮಪ್ಪ(ಇಂಧನ ರಾಜ್ಯ ಮಂತ್ರಿಗಳು)-

(ಅ) 885 ಉಪಗ್ರಾಮಗಳು (ಹ್ಯಾಮ್ಲೆಟ್ಸ್) 357 ಹರಿಜನ ಬಸ್ತಿಗಳು ಮತ್ತು 211 ಗಿರಿಜನ ಬಸ್ತಿಗಳು ವಿದ್ಯುದ್ಧೀಕರಣಕ್ಕಾಗಿ ಬಾಕಿ ಉಳಿದಿವೆ

ತಾಲ್ಲೂಕುವಾರು ವಿವರಗಳು ಕೆಳಕಂಡಂತಿದೆ:-

ತಾಲ್ಲೂಕು	ಉಪಗ್ರಾಮ (ಹ್ಯಾಮ್ಲೆಟ್ಸ್)	ಹರಿಜನ ಬಸ್ತಿ	ಗಿರಿಜನ ಬಸ್ತಿ
ಚಿಕ್ಕಮಗಳೂರು	48	72	1
ಕಡೂರು	32	31	-
ತರೀಕೆರೆ	9	9	-
ಮೂಡಿಗೆರೆ	101	58	51
ಶೃಂಗೇರಿ	233	22	34
ನರಸಿಂಹರಾಜಪುರ	168	45	19
ಕೊಪ್ಪ	294	120	106
ಒಟ್ಟು	885	357	211

(ಆ) ಬಾಕಿ ಉಳಿದಿರುವ ಉಪ ಗ್ರಾಮಗಳು, ಹರಿಜನ ಮತ್ತು ಗಿರಿಜನ ಬಸ್ತಿಗಳನ್ನು ಮುಂಬರುವ ವರ್ಷಗಳಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಲಭ್ಯವಿರುವ ಆರ್ಥಿಕ ಸಂಪನ್ಮೂಲಕ್ಕೆ ಅನುಗುಣವಾಗಿ ಹಂತ ಹಂತವಾಗಿ ವಿದ್ಯುದ್ಧೀಕರಿಸಲಾಗುವುದು. ಸುಮಾರು ಹತ್ತು ವರ್ಷಗಳಲ್ಲಿ ವಿದ್ಯುತ್ ಪೂರೈಕೆ ಮಾಡಬಹುದಾದ ಸಾಧ್ಯತೆ ಇದೆ.

ಶ್ರೀಮತಿ ಮೋಟಮ್ಮ:- ಸನ್ಮಾನ್ಯ ಸಭಾಧ್ಯಕ್ಷರೇ, ನಮ್ಮ ಇಡೀ ಜಿಲ್ಲೆಯಲ್ಲಿ 885 ಹ್ಯಾಮ್ಲೆಟ್ ಗ್ರಾಮಗಳು, 357 ಹರಿಜನ ಬಸ್ತಿಗಳು, 211 ಗಿರಿಜನ ಬಸ್ತಿಗಳು ಇವೆ. ಇವುಗಳಿಗೆ ಇನ್ನೂ ಎಲೆಕ್ಟ್ರಿಫಿಕೇಷನ್ ಆಗಿಲ್ಲ. ಇದನ್ನು ಆದಷ್ಟು ಬೇಗನೆ ಮಾಡುತ್ತೇವೆಂದು ಹೇಳಿದ್ದಾರೆ. ಏತಕ್ಕೆಂದರೆ ನಮ್ಮದು ಅವರಿಗೆ ಗೊತ್ತಿದ್ದ ಹಾಗೆ ಮಲೆನಾಡು ಪ್ರದೇಶ ಹಾಗೂ ಗುಡ್ಡಗಾಡು ಪ್ರದೇಶ. ಒಂದು ಹಳ್ಳಿಗೆ ಅಂದರೆ ಹ್ಯಾಮ್ಲೆಟ್‌ಗೆ ಎಲೆಕ್ಟ್ರಿಫಿಕೇಷನ್ ಮಾಡಬೇಕಾದರೆ ಎರಡು ಮೂರು ತಿಂಗಳಾಗುತ್ತದೆ. ಇಂತಹ ಪರಿಸ್ಥಿತಿ ಇರಬೇಕಾದರೆ ಎಷ್ಟು ಗ್ರಾಮಗಳಿಗೆ ಇನ್ನು ಎಷ್ಟು ವರ್ಷದಲ್ಲಿ ನೀವು ವಿದ್ಯುತ್ ಕೊಡುವುದಕ್ಕೆ ಸಾಧ್ಯ ಎಂಬುದನ್ನು ತಾವು ಹೇಳಬೇಕು. ಇದನ್ನು ಆದಷ್ಟು ಜಾಗ್ರತೆ ಮಾಡುವುದಕ್ಕೆ ಒಂದು ಸ್ಪೆಷಲ್ ಕೆ.ಇ.ಬಿ. ಸಬ್ ಡಿವಿಜನ್‌ನ್ನು ಮಲೆನಾಡು ಪ್ರಾಂತ್ಯದಲ್ಲಿ ಮಾಡುತ್ತೀರಾ? ಆದರಲ್ಲೂ ಮುಖ್ಯವಾಗಿ ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಕೊಡಗು ಈ ಜಿಲ್ಲೆಗಳಲ್ಲಿ ಸ್ಪೆಷಲ್ ಕೆ.ಇ.ಬಿ. ಸಬ್ ಡಿವಿಜನ್ ಓಪನ್ ಮಾಡಿ ರೂರಲ್ ಎಲೆಕ್ಟ್ರಿಫಿಕೇಷನ್ ಏನು ಇಲ್ಲದೇ

ಹೋಗಿರುವ ಈ ಹರಿಜನ ಬಸ್ತಿಗಳು ಮತ್ತು ಹ್ಯಾಮ್ಲೆಟ್ ಗ್ರಾಮಗಳು ಏನಿವೆ, ಇವುಗಳಿಗೆ ಎಲೆಕ್ಟ್ರಿಫಿಕೇಷನ್ ಮಾಡಿಕೊಡುವುದಕ್ಕೆ ಅನುಕೂಲ ಮಾಡಿಕೊಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಂ. ರಾಮಪ್ಪ:- ಅಧ್ಯಕ್ಷರೇ, ಇವತ್ತು ಮೋಟಮ್ಮನವರು ಹೇಳಿದಹಾಗೆ ಅವುಗಳಿಗೆ ವಿದ್ಯುತ್ ಕೊಡಬೇಕಾದರೆ ಹಣ ನಮಗೆ ಎಷ್ಟು ಕೊಟ್ಟರೆ ನಾವು ಅಷ್ಟು ಮಾಡುವವರು. ಮಲೆನಾಡು ಅಭಿವೃದ್ಧಿ ಮಂಡಳಿಯಿಂದ ಏನಾದರೂ ಫಂಡ್ಸ್ ಕೊಡಿಸಿದರೆ ನಾವು ಮಾಡಿಸುತ್ತೇವೆ ಎಂದು ಅವರಿಗೆ ಹೇಳುತ್ತೇನೆ.

ಶ್ರೀಮತಿ ಮೋಟಮ್ಮ:- ಇಂದೊಂದು ತರಹ ವಿಚಿತ್ರವಾಗಿದೆ. ನಾನು ಎಲ್ಲಿಂದ ಹಣ ಕೊಡಿಸುವುದು? ತಾವು ಮುಖ್ಯಮಂತ್ರಿಗಳನ್ನು ಕೇಳಿ. ಅವರೂ ಕೂಡ ಮಲೆನಾಡು ಪ್ರಾಂತ್ಯದಿಂದಲೇ ಬಂದವರು. ಮುಖ್ಯಮಂತ್ರಿಗಳನ್ನು ಕೇಳಿದರೆ ಒಳ್ಳೆಯದಾಗುತ್ತದೆ. ಅವರಲ್ಲೂ ಹ್ಯಾಮ್ಲೆಟ್ ಗ್ರಾಮಗಳು ಹರಿಜನ ಬಸ್ತಿಗಳು ಉಳಿದು ಹೋಗಿದೆ. ದಯವಿಟ್ಟು ಇಲ್ಲಿಗೆ ಒಂದು ಹೊಸ ಸಬ್‌ಡಿವಿಜನ್ ಓಪನ್ ಮಾಡುವುದಕ್ಕೆ ಅವರ ಹತ್ತಿರ ಹಣ ಪಡೆದು ಇದನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತಾರೆಯೇ ಎಂದು ದಯವಿಟ್ಟು ಕೇಳಿ ಈ ಕೆಲಸ ಪ್ರಾರಂಭ ಮಾಡಿ.

ಶ್ರೀ ಎಂ. ರಾಮಪ್ಪ:- ಕಾರ್ಯಕ್ರಮ ಅಂತೂ ಹಾಕಿಕೊಂಡಿದ್ದೇವೆ. ಆದಷ್ಟು ಬೇಗ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ವಿಷಯ:- ಟಿ.ನರಸೀಪುರ ತಾಲ್ಲೂಕಿನ ಆಲಗೂಡಿನ ಹತ್ತಿರ ಸಂಭವಿಸಿದ ಕ.ರಾ.ರ.ಸಾ.ಸಂಸ್ಥೆಯ ಬಸ್ಸಿನಿಂದಾದ ಅಪಘಾತದ ಬಗ್ಗೆ

ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ : 432 (2262)

ಶ್ರೀಮತಿ ದಮಯಂತಿ ಬೋರೇಗೌಡ (ಶ್ರೀರಂಗಪಟ್ಟಣ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ

(ಅ) ಟಿ. ನರಸೀಪುರ ತಾಲ್ಲೂಕಿನ ಆಲಗೋಡಿನ ಹತ್ತಿರ ಸಂಭವಿಸಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ಸಿನಿಂದುಂಟಾದ ಅಪಘಾತದಲ್ಲಿ ಸಾವುಗಳ ಮತ್ತು ಗಾಯಗೊಂಡವರ ಸಂಖ್ಯೆ ಎಷ್ಟು?

(ಆ) ಎಷ್ಟು ಜನರಿಗೆ ಪರಿಹಾರ ನೀಡಲಾಗಿದೆ ಮತ್ತು ಪರಿಹಾರದ ಮೊತ್ತವೆಷ್ಟು?

ಶ್ರೀ ಅಜೀಜ್ ಸೇಠ್(ಸಾರಿಗೆ ಸಚಿವರು)

(ಅ) ಟಿ.ನರಸೀಪುರ ತಾಲ್ಲೂಕಿನ ಆಲಗೋಡಿನ ಹತ್ತಿರ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸಿನಿಂದ ಯಾವುದೇ ಅಪಘಾತವಾಗಿರುವುದಿಲ್ಲ. ಆದರೂ ಸಹ ಇದರ ಬಗ್ಗೆ ವಿವರವಾದ ತನಿಖೆಯನ್ನು ನಡೆಸಲಾಗುತ್ತಿದೆ.

(ಆ) ಮೇಲಿನ ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

ಶ್ರೀಮತಿ ದಮಯಂತಿ ಬೋರೇಗೌಡ:- ಮಾನ್ಯ ಅಧ್ಯಕ್ಷರೇ ಉತ್ತರದಲ್ಲಿ ಆಕ್ಸಿಡೆಂಟ್ ಗಮನಕ್ಕೆ ಬಂದಿಲ್ಲವೆಂದು ಹೇಳಿದ್ದಾರೆ. ಆಕ್ಸಿಡೆಂಟ್ ಆಗಿದ್ದು ನಿಜ. ಅದು ಟಿ.ನರಸೀಪುರ ಎಂ.ಎಲ್.ಎ.ಯವರಿಗೂ ಸಹ ಗೊತ್ತಿದೆ. ಆ ಆಕ್ಸಿಡೆಂಟ್‌ನಲ್ಲಿ ರಂಗ ಎನ್ನತಕ್ಕಂಥ ಒಬ್ಬ ಬಡವನು ಎರಡು ಕಾಲು ಕಟ್ ಮಾಡಿಸಿಕೊಂಡು ಮಾರನೇ ದಿವಸ ತೀರಿಕೊಂಡ. ಮನುಷ್ಯನ ಪ್ರಾಣಕ್ಕೆ ಬೆಲೆ ಇಲ್ಲವೆಂದು ನನಗನಿಸುತ್ತದೆ. ನಿಮ್ಮ ದಾಖಲೆಗಳಲ್ಲಿ ಆಕ್ಸಿಡೆಂಟ್ ಬಗ್ಗೆ ಏನೂ ಇಲ್ಲವೆಂದು ಹೇಳಿದ್ದಾರೆ.

ಶ್ರೀ ಅಜೀಜ್ ಸೇಠ್:- ಈ ವಿಷಯದಲ್ಲಿ ನಾನು ವಿವರಗಳನ್ನು ತರಿಸಿಕೊಂಡಿದ್ದೇನೆ. Infact even to-day morning before entering into this August House, I have made enquiries... ಮೈಸೂರು ಡಿವಿಜನ್‌ನಲ್ಲಿ ಯಾವುದೂ ಆಕ್ಸಿಡೆಂಟ್ ಆಗಿಲ್ಲವೆಂದು ಉತ್ತರ ಬಂದಿದೆ. ಮಾನ್ಯ ಸದಸ್ಯರು ಟಿ.ನರಸೀಪುರ ಎಂ.ಎಲ್.ಎ. ಅವರು ಸಹ ಇದನ್ನು ತಿಳಿದುಕೊಂಡಿದ್ದಾರೆಂದು